


# ಕೊಟ್ಟ ಕುದುರೆಯನು ಏರದವ..!

■ **ವೆಂಕಟೇಶ ಚಾಗಿ ಲಿಂಗಸುಗೂರ**

ಕಪಾಲಪೇತ ರಾಜನಿಗೆ ಒಬ್ಬನೇ ಒಬ್ಬ ಮಗನಿದ್ದನು. ಅವನ ಹೆಸರು ಜ್ಞಾನಾಧರ. ಕಪಾಲಪೇತ ರಾಜನಿಗೆ ತನ್ನ ಮಗನನ್ನು ವೀರ ಶೂರನನ್ನಾಗಿ ಮಾಡಬೇಕೆಂಬ ಬಯಕೆಯಿಂದ ಹಲವು ಪರಿಣಿತರಿಂದ ಜ್ಞಾನಾಧರನಿಗೆ ವಿವಿಧ ಯುದ್ಧಕಲೆಗಳ ತರಬೇತಿ ಕೊಡಿಸಿದನು. ದೇಶ ವಿದೇಶದ ಪ್ರಸಿದ್ಧ ಗುರುಗಳು ಜ್ಞಾನಾಧರನಿಗೆ ವಿವಿಧ ವಿದ್ಯೆಗಳನ್ನು ಹೇಳಿಕೊಟ್ಟರು. ಕಪಾಲಪೇತ ರಾಜನು ತನ್ನ ಮಗನು ರಾಜ್ಯದ ರಕ್ಷಣೆಗೆ ಸಮರ್ಥನಾದ ಕೂಡಲೇ ರಾಜ್ಯಭಾರವನ್ನು ತನ್ನ ಮಗನಿಗೆ ವಹಿಸಿಕೊಟ್ಟು ತಾನು ತೀರ್ಥಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳುವ ನಿರ್ಧಾರ ಮಾಡಿದನು.

ಜ್ಞಾನಾಧರನ ಮನದಲ್ಲಿ ತಾನೊಬ್ಬ ರಾಜನ ಮಗನೆಂಬ ಅಹಂ ತುಂಬಿಕೊಂಡಿತ್ತು. ಎಲ್ಲ ಗುರುಗಳೂ ಅವನಿಗೆ ವಿದ್ಯೆಯನ್ನು ಹೇಳಿಕೊಡುತ್ತಿದ್ದರೇ ಹೊರತು ಜ್ಞಾನಾಧರ ಕಲಿತ ವಿದ್ಯೆಯನ್ನು ಯಾರೂ ಪರೀಕ್ಷಿಸಲು ಹೋಗಲಿಲ್ಲ. ಯಾರಾದರೂ ಗುರುಗಳು ಜ್ಞಾನಾಧರನನ್ನು ಪರೀಕ್ಷಿಸಲು ಮುಂದೆ ಬಂದರೆ ಅವರನ್ನು ಹೀಯಾಳಿಸಿ ಪರೀಕ್ಷೆ ಇಡದಂತೆ ಆಜ್ಞೆ ಮಾಡುತ್ತಿದ್ದನು. ಹಾಗೂ ತನ್ನ ತಂದೆಗೆ ಈ ವಿಷಯದ ಬಗ್ಗೆ ಹೇಳಿದ್ದಲ್ಲಿ ಅವರ ಶಿರಚ್ಛೇದ ಮಾಡುವುದಾಗಿ ಭೀತಿ ಹುಟ್ಟಿಸಿದ. ಇದರಿಂದಾಗಿ ಯಾರೇ ಗುರುಗಳು ಬಂದರೂ ಜ್ಞಾನಾಧರನಿಗೆ ವಿದ್ಯೆಯನ್ನು ಹೇಳಿಕೊಟ್ಟು ಹೋಗುತ್ತಿದ್ದರೇ ಹೊರತು ಯಾರೂ ಪರೀಕ್ಷಿಸುತ್ತಿರಲಿಲ್ಲ. ತಂದೆಯ ಎದುರು ತಾನು ಹಲವಾರು ವಿದ್ಯೆಗಳನ್ನು ಕಲಿತಿರುವಂತೆ ನಂಬಿಸುತ್ತಿದ್ದ.

ಒಮ್ಮೆ ಆ ರಾಜ್ಯದ ಮೇಲೆ ಶತ್ರುಗಳು ಆಕ್ರಮಣ ಮಾಡಿದರು. ಕಪಾಲಪೇತ ಮಹಾರಾಜನು ಸಕಲ ಸೈನ್ಯದೊಂದಿಗೆ ಯುದ್ಧಕ್ಕೆ ತೆರಳಿದನು. ತನ್ನ ಮಗ ಜ್ಞಾನಾಧರನಿಗೆ ಹಲವಾರು ವಿದ್ಯೆಗಳು ತಿಳಿದಿವೆ. ಅವನನ್ನು ಕರೆದುಕೊಂಡು ಹೋದರೆ ಯುದ್ಧವನ್ನು ಸುಲಭವಾಗಿ ಗೆಲ್ಲಬಹುದು ಎಂದು ಯೋಚಿಸಿ ಮಗನಿಗೆ ಯುದ್ಧಕ್ಕೆ ಸಿದ್ಧವಾಗಲು ತಿಳಿಸಿದನು. ಜ್ಞಾನಾಧರನಿಗೆ ಭಯವಾಯಿತು. ತನಗೆ ಗೊತ್ತಿರುವುದೆಲ್ಲಾ ಅರೆಬರೆ ವಿದ್ಯೆ. ಏನು ಮಾಡುವುದು ಎಂದು ಯೋಚಿಸಿ ತಾನು ಯುದ್ಧಕ್ಕೆ ಹೋಗಲು ಸಿದ್ಧನಿದ್ದೂ ಒಂದು ಉತ್ತಮವಾದ ಕುದುರೆ ಬೇಕೆಂದು ತನ್ನ ತಂದೆಗೆ ಹೇಳಿದನು.

ಅದರಂತೆ ಕಪಾಲಪೇತ ಹಲವಾರು ಉತ್ತಮ ಕುದುರೆಗಳನ್ನು ತರಿಸಿದನು. ಜ್ಞಾನಾಧರನು ಪ್ರತಿ ಕುದುರೆಗಳನ್ನು ನೋಡಿ ಏನಾದರೊಂದು ಕಾರಣ ನೀಡಿ ಕುದುರೆಗಳ ದೋಷಗಳನ್ನು ಹೇಳುತ್ತ ಯುದ್ಧಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸತೊಡಗಿದನು. ಜ್ಞಾನಾಧರನ ನಡವಳಿಕೆ ಕಂಡು ಕಪಾಲಪೇತನಿಗೆ ಅನುಮಾನ ಮೂಡಿತು. ಸರಿ ತಾನು ಹೇಳುವ ಕುದುರೆಯನ್ನು ಏರಲೇಬೇಕು ಎಂದು ಆಜ್ಞೆ ಮಾಡಿದನು. ಜ್ಞಾನಾಧರನು ತನ್ನ ತಂದೆ ಹೇಳಿದ ಕುದುರೆಯನ್ನು ಏರಿ ಮುನ್ನಡೆಸಲಾಗದೇ ಕುದುರೆ ಮೇಲಿಂದ ಬಿದ್ದನು. ನಂತರ ಕುದುರೆಗೆ ನನ್ನ ಮೇಲೆ ದ್ವೇಷವಿದೆ ಎಂದು ಕುದುರೆಯ ಬಗ್ಗೆ ಸಲ್ಲದ ಆರೋಪಗಳನ್ನು ಹೇಳತೊಡಗಿದನು. ಆಗ ಕಪಾಲಪೇತನಿಗೆ ತನ್ನ ಅನುಮಾನ ನಿಜವಾಗಿದೆ ಎಂದು ಅನಿಸಿತು. ತನ್ನ ಮಗ ಜ್ಞಾನಾಧರ ಸರಿಯಾಗಿ ವಿದ್ಯೆಯನ್ನು ಕರಗತಮಾಡಿಕೊಂಡಿಲ್ಲ ಎಂಬುದು ದೃಢವಾಯಿತು. ಹಾಗೂ ಜ್ಞಾನಾಧರನಿಗೆ ವಿದ್ಯೆಯನ್ನು ನೀಡಿದ ಗುರುಗಳನ್ನು ಕರೆಯಿಸಿ ಜ್ಞಾನಾಧರನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದಾಗ ನಿಜ ಹೊರಬಿದ್ದಿತು. ಆಗ ಕಪಾಲಪೇತನು ಎಲ್ಲಾ ಗುರುಗಳಿಗೆ ಆಜ್ಞೆ ಮಾಡುತ್ತಾ ನನ್ನ ಮಗನಿಗೆ ಎಲ್ಲಾ ವಿದ್ಯೆಗಳು ಕರಗತವಾಗಬೇಕು. ಅದಕ್ಕಾಗಿ ಅವನಿಗೆ ನಾನಾ ಪರೀಕ್ಷೆಗಳನ್ನು ಏರ್ಪಡಿಸಿ ಕಾಲಕಾಲಕ್ಕೆ ನನಗೆ ಮಾಹಿತಿ ನೀಡಬೇಕು ಎಂದಾಗ ಎಲ್ಲಾ ಗುರುಗಳು ಜ್ಞಾನಾಧರನಿಗೆ ಎಲ್ಲಾ ರೀತಿಯ ವಿದ್ಯೆಗಳನ್ನು ಕರಗತವಾಗಿಸಲು ಅನೇಕ ಕ್ರಮಗಳನ್ನು ಕೈಗೊಂಡರು. ಕೆಲವು ದಿನಗಳ ನಂತರ ಜ್ಞಾನಾಧರನಿಗೆ ಎಲ್ಲಾ ವಿದ್ಯೆಗಳು ಕರಗತವಾದವು. ಆಗ ಜ್ಞಾನಾಧರ ಯಾವುದೇ ಕುದುರೆಯನ್ನು ನೀಡಿದರೂ ಅದರ ಮೇಲೆ ಸವಾರಿ ಮಾಡುವ ಸಾಮರ್ಥ್ಯ ಗಳಿಸಿದನು. ■